| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 135/2014**

**ಪಿ.ಡಬ್ಲು : 1 ಸಿ.ಡಬ್ಲು : 1**

ಸಾಕ್ಷಿದಾರನ ಹೆಸರು : ಪಿ ಕೆ ರಾಜಪ್ಪನ್
ತಂದೆಯ ಹೆಸರು : ಕುಮಾರನ್
ಪ್ರಾಯ : 70 ವರ್ಷ
ಉದ್ಯೋಗ : ನಿವೃತ್ತ ಅರಣ್ಯ ಇಲಾಖಾ ಅಧಿಕಾರಿ
ವಾಸ : ಕೇರಳ

ದಿನಾಂಕ 06.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಶ್ರೀಮತಿ ಎಂ ಪಿ ವಕೀಲರನ್ನು ಭಾಷಾಂತರಕಾರರಾಗಿ ನೇಮಿಸಲಾಯಿತು.

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ನಾನು 2010 ನೇ ಇಸ್ವಿಯ ಮೊದಲಿನಿಂದ ಮುದ್ರಾಡಿ ಗ್ರಾಮದ ಬಳ್ಳಾಡಿ ಎಂಬಲ್ಲಿ ರಬ್ಬರ್ ಎಸ್ಟೇಟ್ ರಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಸದ್ರಿ ಜಾಗದ ಸರ್ವೆ ನಂಬ್ರ 132/1, 132/2 ಮತ್ತು 132/3 ಆಗಿರುತ್ತದೆ. ಸದ್ರಿ ಜಮೀನು 2.74 ಎಕ್ರೆ ವಿಸ್ತೀರ್ಣ ಹೊಂದಿರುತ್ತದೆ.

ಸದ್ರಿಜಮೀನಿಗೆ ಸಂಬಂಧಿಸಿದ ಒಂದು ಅಧಿಕಾರ ಪತ್ರವನ್ನು ಜಮೀನಿನ ಮಾಲಕ ಬಾಬು ಶೆಟ್ಟಿ ರವರು ನನಗೆ ನೀಡಿರುತ್ತಾರೆ. ಸದ್ರಿ ಬಾಬು ಶೆಟ್ಟಿಯವರು ಅನಾರೋಗ್ಯದ ಕಾರಣ ಜಮೀನು ನೊಂದಾಣಿ ಮಾಡಲು ನೊಂದಾಣಿ ಕಚೇರಿಗೆ ಬರಲು ಸಾಧ್ಯವಾಗದ ಕಾರಣ ನನಗೆ ಅಧಿಕಾರ ಪತ್ರ ನೀಡಿರುತ್ತಾರೆ. ಅಧಿಕಾರಪತ್ರ ನನ್ನ ಕೋಣೆಯಲ್ಲಿ ನಾನು

ಇಟ್ಟಿರುತ್ತೇನೆ. 1 ನೇ ಆರೋಪಿಯು ನನ್ನ ತಾಯಿಯ ಸಹೋದರಿಯ ಮಗನಾಗಿರುತ್ತಾನೆ. 1 ನೇ ಆರೋಪಿಯು ಆಗಾಗ ನನ್ನ ಮನೆಗೆ ಬಂದು ವಾಸ್ತವ್ಯ ಮಾಡುತ್ತಿದ್ದರು. 2011 ಮಾರ್ಚ್ 26 ರಂದು ಸರ್ವೆ ನಂಬ್ರ 132/1, 132/2 ಮತ್ತು 132/3 ಜಮೀನು 1 ಮತ್ತು 2 ನೇ ಆರೋಪಿತರ ಹೆಸರಿಗೆ ನೋಂದಣಿಯಾಗಿರುವುದು ತಿಳಿದುಬಂದಿರುತ್ತದೆ. ಕಾರ್ಕಳ ನೋಂದಾಣಿ ಕಚೇರಿಗೆ ಹೋಗಿ ಈ ಬಗ್ಗೆ ವಿಚಾರಿಸಲಾಗಿ ನೊಂದಾಣಿಯಾಗಿರುವ ವಿಷಯ ದೃಢಪಟ್ಟಿರುತ್ತದೆ. ನನ್ನ ಹೆಸರಿಗೆ ನೀಡಿರುವ ಅಧಿಕಾರಪತ್ರವನ್ನು ನೋಂದಣಾ ಕಚೇರಿಯಲ್ಲಿ 3 ನೇ ಆರೋಪಿ ಹಾಜರುಪಡಿಸಿ ಜಮೀನು ನೋಂದಾಣಿ ಮಾಡಿರುವುದು ತಿಳಿದುಬಂದಿರುತ್ತದೆ. ನೋಂದಣಾ ಕಚೇರಿಯಲ್ಲಿ ವಿಚಾರಿಸಿದಾಗ ನನ್ನ ವಿಳಾಸ ನಮೂದು ಇರುವ 3 ನೇ ಅರೋಪಿ ತಂಗಪ್ಪನ್ ಭಾವಚಿತ್ರ ಇರುವ ಚಾಲನ ಅನುಜ್ಞ ಪತ್ರವನ್ನು ಹಾಜರುಪಡಿಸಿರುವುದು ತಿಳಿದುಬಂದಿರುತ್ತದೆ. ತದನಂತರ ತಹಸಿಲ್ದಾರ್ ರವರಿಗೆ ರಿಜಿಸ್ಟ್ರೇಶನ್ ನಂತರದ ಮುಂದಿನ ಕ್ರಮವನ್ನು ತಡೆಯುವಂತೆ ಒಂದು ಅರ್ಜಿಯನ್ನು ನೀಡಿರುತ್ತೇನೆ. ತದನಂತರ ಕಾರ್ಕಳ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವನ್ನು ದಾಖಲಿಸಿರುತ್ತೇನೆ. ಸದ್ರಿ ವ್ಯಾಜ್ಯದಲ್ಲಿ ನೋಂದಣಿಯನ್ನು ರದ್ದುಪಡಿಸಿದ್ದು ಜಮೀನು ವಾಪಸ್ಸು ನನಗೆ ಬಂದಿರುತ್ತದೆ. ದಿ:16.08.2012 ರಂದು ಹೆಬ್ರಿ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ತನಿಖೆ ನಡೆಸಬೇಕು ಎಂದು 1 ರಿಂದ 3 ನೇ ಆರೋಪಿತರ ವಿರುದ್ದ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಿರ್ಯಾದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮರುದಿನ ದಿನಾಂಕ 17.08.2012 ರಂದು ಹೆಬ್ರಿ ಪೊಲೀಸರು ಬೆಳಿಗ್ಗೆ 9.00 ಗಂಟೆ ಸಮಯಕ್ಕೆ ನನ್ನ ಮನೆಗೆ ಬಂದು ನಾನು ನನ್ನ ಅಧಿಕಾರ ಪತ್ರ ಇಟ್ಟಿರುವ ಸ್ಥಳ , ನನ್ನ ಕೋಣೆಯನ್ನು ಪರಿಶೀಲಿಸಿ ಮಹಜರು ಮಾಡಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-2 ಮತ್ತು 11 ರವರು ಹಾಜರಿದ್ದೇವು. ನಾನು ಅಧಿಕಾರಪತ್ರ ಇಟ್ಟಿರುವ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿಕೊಟ್ಟಿರುತ್ತೇನೆ. ಸಾಕ್ಷಿಯು ತಕ್ಷೀರು ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ತಕ್ಷೀರು ಸ್ಥಳ ಮಹಜರನ್ನು ನಿಪಿ-2 ಎಂದು,

ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೊಲೀಸರ ಮುಂದೆ ನಾನು 2 ಬಾರಿ ಮುಂದುವರಿದ ಹೇಳಿಕೆಯನ್ನು ನೀಡಿರುತ್ತೇನೆ. ಅಧಿಕಾರಪತ್ರದ ಮೂಲಪ್ರತಿಯು ನನ್ನ ಬಳಿ ಇರುವುದಿಲ್ಲ. ಆದ್ದರಿಂದ ನ್ಯಾಯಾಲಯಕ್ಕೆ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ.

ಮಾನ್ಯ ಸಸಅ ರವರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ